ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

	ಪ್ರೊಫೆಸರ್‌ಗಳು (ಪ್ರಾಧ್ಯಾಪಕರು)	ರೀಡರ್ಸ್ (ಪ್ರವಾಚಕರು)	ಲೆಕ್ಚರರ್‌ಗಳು (ಅಧ್ಯಾಪಕರು)	ಒಟ್ಟು
	೭೩	೧೫೭	೨೮೬	೫೧೬
ಪರಿಶಿಷ್ಟಜಾತಿ	೨	೧೧	೨೦	೩೩
ಪರಿಶಿಷ್ಟವರ್ಗ	—	—	೨	೨

ರಾಜ್ಯದ ವಿಶ್ವವಿದ್ಯಾನಿಲಯಂಗಳಲ್ಲಿ ಅಂಚೆ ತೆರಪಿನ ಶಿಕ್ಷಣದ ಬಗ್ಗೆ

೧೨೭೧. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳಲ್ಲಿ ಅಂಚೆ ಮತ್ತು ತೆರಪಿನ ವ್ಯವಸ್ಥೆ ಜಾರಿಯು ಲ್ಲಿದೆ ಈ ಸಂಸ್ಥೆಗಳಿಂದ ಇದುವರೆವಿಗೂ ಎಷ್ಟು ಮಂದಿ ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ (ಎಂ.ಎ. ಎಲ್.ಎಲ್.ಬಿ ಮತ್ತು ಬಿ.ಎ.ಗಳ ಬಗ್ಗೆ ವಿವರಗಳನ್ನು ಒದಗಿಸುವುದು)

೨) ಅಂಚೆ ಮತ್ತು ತೆರಪಿನ ಶಿಕ್ಷಣಕ್ಕಾಗಿ ಮುಕ್ತ ವಿಶ್ವವಿದ್ಯಾನಿಲಯ (ಓಪನ್ ಯುನಿವರ್ಸಿಟಿ) ಸ್ಥಾಪಿಸಲು ಸರಕಾರದವರು ಯೋಚಿಸಿದ್ದಾರೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ತೆಗೆದು ಕೊಂಡ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

೧) ಎರಡು, ಬೆಂಗಳೂರು, ಮೈಸೂರು ವಿಶ್ವವಿದ್ಯಾನಿಲಯಗಳು ಈ ಸಂಸ್ಥೆಗಳಿಂದ ಪದವಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಮೈಸೂರು ವಿಶ್ವವಿದ್ಯಾನಿಲಯ

೧) ಬಿ. ಎ. — ೧೯೭೬-೮೬ — ೬೩೬

೨) ಎಂ. ಎ. — ೧೯೭೬-೮೬ — ೬೭೫

೩) ಕಾನೂನು ಪದವಿಗಳಿಗೆ ಅಂಚೆ ಮತ್ತು ತೆರಪಿನ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿಲ್ಲ

ಬೆಂಗಳೂರು ವಿಶ್ವವಿದ್ಯಾನಿಲಯ

೧) ಬಿ. ಎ. — ೧೯೮೬-೮೭ — ೧೦೪

೨) ಎಂ. ಎ. ಮತ್ತು ಕಾನೂನು ಪದವಿಗಳ ಅಂಚೆ ತೆರಪಿನ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿರುವು ದಿಲ್ಲ.

೨) ಹೌದು, ಓಪನ್ ಯುನಿವರ್ಸಿಟಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಮತ್ತು ಅದಂ ಪರಿಶೀಲನೆಯಲ್ಲಿದೆ.

ರಾಜ್ಯ ವಯಸ್ಕರ ಶಿಕ್ಷಣ ಮಂಡಲಿಯ ಬಗ್ಗೆ

೧೫೩೭. ಶ್ರೀ ಎಂ. ಶಿವಣ್ಣ(ಹೆಗಡದೇವನಕೋಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ವಯಸ್ಕರ ಶಿಕ್ಷಣ ಮಂಡಲಿಯಲ್ಲಿರುವ ವಿದ್ಯಾ ಪೀಠಗಳೆಷ್ಟು ?

ಆ) ಇವುಗಳಲ್ಲಿ ಪುರುಷರಿಗಾಗಿರುವ ವಿದ್ಯಾಪೀಠಗಳೆಷ್ಟು ? ಹಾಗೂ ಮಹಿಳೆಯರಿಗಾಗಿರುವ ವಿದ್ಯಾಪೀಠಗಳೆಷ್ಟು ?